1. ಕೇಂದ್ರ	2. ರಾಜ್ಯ	3. ಖಾಸಗಿ
1. ಎಡ್-ಸಲ್-11	1. ಕೆಎಸ್ಎಸ್ಐಡಿಸಿ -5	1. ಇಸಿಐಎಲ್-1
2. ಎನ್‌ಬಿಸಿಸಿ-1	2. ಕೆ.ಎಲ್.ಎ.ಸಿ.-4	2. ಎನ್‌ಸಿಸಿಎಲ್-9
3. ಎನ್‌ಪಿಸಿಸಿ-16		3. ಎಂಸಿಸಿ -2
4. ಮೆಕಾನ್-10		4. ಐಸಿಆರ್‌ಎಲ್-2
ಒಟ್ಟು 39	9	14

3. ಹೌದು

4. ಕಾಮಗಾರಿ ಕಳಪೆಯಾಗಿರುವ ಬಗ್ಗೆ ದೂರು ಬಂದಿದೆ. ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ) ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಇವರಿಗೆ ಕಾಮಗಾರಿಯ ಗುಣಮಟ್ಟದ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಕೋರಲಾಗಿತ್ತು. ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ) ಇವರ ವರದಿ ದಿನಾಂಕ: 20/5/2002ರ ಪ್ರಕಾರ ಗುಣಮಟ್ಟ ತೃಪ್ತಿಕರವಾಗಿರುವುದು ಕಂಡು ಬರುತ್ತದೆ.

ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆ ಕುರಿತು

356(648) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಗಣಿಗಾರಿಕೆಗೆ ಪರವಾನಗಿ ನೀಡಿದ ಒಟ್ಟು ಸಂಖ್ಯೆ ಎಷ್ಟು;

ಆ. ಕಳೆದ ಸಾಲಿನಲ್ಲಿ ನೀಡಿದ ಪರವಾನಗಿಗಳ ಸಂಖ್ಯೆ ಎಷ್ಟು;

ಇ. ಎಷ್ಟು ಅರ್ಜಿಗಳು ಪರವಾನಗಿಗಾಗಿ ಬಾಕಿ ಇದೆ;

ಈ. ಈ ಅರ್ಜಿಗಳ ಏಲೇವಾರಿಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

1. ಒಂದು. ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ಲಿಮಿಟೆಡ್

2. ಯಾವುದೂ ಇಲ್ಲ.

3. ಎರಡು ಅರ್ಜಿಗಳು ಬಾಕಿ ಉಳಿದಿರುತ್ತವೆ.

4. ಸದರಿ ಅರ್ಜಿಗಳು ಪಶ್ಚಿಮಘಟ್ಟ ಪ್ರದೇಶದ ವ್ಯಾಪ್ತಿಯಲ್ಲಿರುವುದರಿಂದ ಇವುಗಳನ್ನು ತಿರಸ್ಕರಿಸಲಾಗುವುದು.

ಒಳನಾಡು ಮೀನುಗಾರರಿಗೆ ವಸತಿ ಗೃಹ

357(649) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮೀನುಗಾರರಿಗೆ ಪ್ರಸಕ್ತ ಸಾಲಿನಲ್ಲಿ ವಸತಿ ಗೃಹ ನಿರ್ಮಿಸಲು ಮಂಜೂರಾದ ಮೊತ್ತ ಎಷ್ಟು? ಇದುವರೆಗೆ ಖರ್ಚಾದ ಮೊತ್ತ ಎಷ್ಟು? (ಜಿಲ್ಲಾವಾರು ವಿವರ ಒದಗಿಸುವುದು);

2. ಈ ಮೊತ್ತದಲ್ಲಿ ಒಳನಾಡು ಮೀನುಗಾರರಿಗೆ ಮಂಜೂರಾದ ಮೊತ್ತ ಎಷ್ಟು ?(ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಶ್ರೀ ವಸಂತಿ ವಿ.ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

1. ಮೀನುಗಾರರಿಗೆ ಪ್ರಸಕ್ತ ಸಾಲಿನಲ್ಲಿ ಹುಡ್ಕೋ ಸಂಸ್ಥೆಯ ಸಾಲದ ಮೂಲಕ ವಸತಿ ಗೃಹ ನಿರ್ಮಿಸಲು ರೂ. 600.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಜಿಲ್ಲಾವಾರು ಮಂಜೂರಾತಿ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ. ಹುಡ್ಕೋ ಸಂಸ್ಥೆಯಿಂದ ಸಾಲದ ವ್ಯವಸ್ಥೆಯನ್ನು ಪೂರ್ಣಗೊಳಿಸಲಾಗುತ್ತಿದ್ದು ಇದುವರೆಗೂ ಯಾವುದೇ ವೆಚ್ಚವಾಗಿರುವುದಿಲ್ಲ.

ಆ. ಒಳನಾಡು ಮೀನುಗಾರರಿಗೆ ಮೇಲೆ ತಿಳಿಸಿದ ಮೊತ್ತದಲ್ಲಿ ರೂ. 468.00ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಜಿಲ್ಲಾವಾರು ಮಂಜೂರಾತಿ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 649 ಕ್ಕೆ

ಅನುಬಂಧ-1

2002-2003ನೇ ಸಾಲಿನಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ಮಂಜೂರಾದ ಮನೆಗಳು ಮತ್ತು ಮೊತ್ತದ ವಿವರ

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	ಮನೆಗಳ ಸಂಖ್ಯೆ	ಮಂಜೂರಾದ ಮೊತ್ತ
1	2	3	4
1.	ಬಾಗಲಕೋಟೆ	15	4.50
2.	ಬೆಂಗಳೂರು (ನಗರ)	45	13.50
3.	ಬೆಂಗಳೂರು (ಗ್ರಾಮಾಂತರ)	100	30.00
4.	ಬೆಳಗಾಂ	85	25.50
5.	ಬಳ್ಳಾರಿ	100	30.00
6.	ಬೀದರ್	30	9.00
7.	ಬಿಜಾಪುರ	75	22.50
8.	ಚಾಮರಾಜನಗರ	105	31.50
9.	ಚಿಕ್ಕಮಗಳೂರು	20	6.00
10.	ಚಿತ್ರದುರ್ಗ	30	9.00
11.	ದಕ್ಷಿಣ ಕನ್ನಡ	65	19.50
12.	ದಾವಣಗೆರೆ	55	16.50
13.	ಗದಗ	70	21.00

1	2	3	4
14.	ಗುಲ್ಬರ್ಗಾ	75	22.50
15.	ಹಾಸನ	85	25.50
16.	ಹಾವೇರಿ	55	16.50
17.	ಕೋಲಾರ	105	31.50
18.	ಕೊಪ್ಪಳ	60	18.00
19.	ಮಂಡ್ಯ	155	46.50
20.	ಮೈಸೂರು	115	34.50
21.	ರಾಯಚೂರು	35	10.50
22.	ಶಿವಮೊಗ್ಗ	55	16.50
23.	ತುಮಕೂರು	90	27.00
24.	ಉಡುಪಿ	190	57.00
25.	ಉತ್ತರ ಕನ್ನಡ	185	55.50
	ಒಟ್ಟು	2000	600.00

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 649 ಕ್ಕೆ

ಅನುಬಂಧ-II

2002-2003ನೇ ಸಾಲಿನಲ್ಲಿ ಒಳನಾಡು ಜಿಲ್ಲೆಗಳಿಗೆ ಮಂಜೂರಾದ ಮನೆಗಳು ಮತ್ತು ಮೊತ್ತದ ವಿವರ

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	ಮನೆಗಳ ಸಂಖ್ಯೆ	ಮಂಜೂರಾದ ಮೊತ್ತ
1	2	3	4
1.	ಬಾಗಲಕೋಟೆ	15	4.50
2.	ಬೆಂಗಳೂರು (ನಗರ)	45	13.50
3.	ಬೆಂಗಳೂರು (ಗ್ರಾಮಾಂತರ)	100	30.00
4.	ಬೆಳಗಾಂ	85	25.50

1	2	3	4
5.	ಬಳ್ಳಾರಿ	100	30.00
6.	ಬೀದರ್	30	9.00
7.	ಬಿಜಾಪುರ	75	22.50
8.	ಚಾಮರಾಜನಗರ	105	31.50
9.	ಚಿಕ್ಕಮಗಳೂರು	20	6.00
10.	ಚಿತ್ರದುರ್ಗ	30	9.00
11.	ದಾವಣಗೆರೆ	55	16.50
12.	ಗದಗ	70	21.00
13.	ಗುಲ್ಬರ್ಗಾ	75	22.50
14.	ಹಾಸನ	85	25.50
15.	ಹಾವೇರಿ	55	16.50
16.	ಕೋಲಾರ	105	31.50
17.	ಕೊಪ್ಪಳ	60	18.00
18.	ಮಂಡ್ಯ	155	46.50
19.	ಮೈಸೂರು	115	34.50
20.	ರಾಯಚೂರು	35	10.50
21.	ಶಿವಮೊಗ್ಗ	55	16.50
22.	ತುಮಕೂರು	90	27.00
	ಒಟ್ಟು	1560	468.00

ಪಶು ವೈದ್ಯಕೀಯ ವಿಶ್ವವಿದ್ಯಾ ನಿಲಯ ಸ್ಥಾಪನೆ

359(651) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪ್ರಸತ್ಕಕ್ತ ಸಾಲಿನ ಆಯವ್ಯಯದಲ್ಲಿ ಜಾನುವಾರು ಔಷಧಿಗೆ ನಿಧಿಪಡಿಸಿದ ಮೊತ್ತ ಎಷ್ಟು: ಇದುವರೆಗೆ ವ್ಯಯ ಮಾಡಿದೆ ಮೊತ್ತ ಎಷ್ಟು.

ಆ. ವ್ಯಯ ಮಾಡಿದ ಜಿಲ್ಲಾವಾರು ಮೊತ್ತವನ್ನು ತಿಳಿಸುವುದು:

ಇ. ಪಶು ರೋಗಗಳ ಹೆಚ್ಚಿನ ಸಂಶೋಧನೆಗಾಗಿ ಪಶುವೈದ್ಯಕೀಯ ವಿಶ್ವವಿದ್ಯಾನಿಲಯದ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಇದ್ದಲ್ಲಿ ಯಾವಾಗ ಸ್ಥಾಪಿಸಲಾಗುವುದು